ಒಂದೇ ಏಟಿಗೆ ಮುರಿದು, ಗೃಹಪ್ರವೇಶ ಮಾಡಿದರು. ಮನೆಯಲ್ಲಿದ್ದ ಚೂರುಪಾರು ಒಡವೆ ನಗದು ಕೈಚೀಲಕ್ಕೆ ತುಂಬಿಕೊಂಡು, ಗಾಬರಿಗೊಂಡಿದ್ದ ಮಾಸ್ತರರ ಸೊಸೆಗೆ ಧೈರ್ಯ ಹೇಳಿ, ಅವಳ ಸ್ವಹಸ್ತದಿಂದಲೇ ಟೀ ಮಾಡಿಸಿ ಕುಡಿದರು. ನಡುರಾತ್ರಿಯ ಸಪ್ಪಳಕ್ಕೆದ್ದ ಮಗುವನ್ನು ಶಿಶುಪಾಲನಾದ ಒಬ್ಬ ಚೋರನು, ಎತ್ತಿಕೊಂಡು ರಮಿಸಿದನು. ಕಳ್ಳರು ಸುಸೂತ್ರವಾಗಿ ಕಾರ್ಯಾಚರಣೆ ಮುಗಿಸಿ ಹೊರಡುವಾಗ ಮಾಸ್ತರರು, 'ನಮ್ಮ ಜೀವವೊಂದನ್ನ ಉಳಿಸಿದಿರಪ್ಪ. ನಿಮಗೆ ಪ್ರಾಣದೇವರು ಮಂಗಳ ಮಾಡಲಿ, ನಮಸ್ಕಾರ' ಎಂದು ಹತಾಶೆಯಿಂದ ಕೈಮುಗಿದರು. ಆಗ ಅವರ ಬೆರಳಲ್ಲಿದ್ದ ಹೊನ್ನುಂಗುರ, ಹರಳ ಬೆಳಕಿನಿಂದ ಫಳಾರನೆ ಮಿನುಗಿತು. ಅವರು ನಿವೃತ್ತರಾದಾಗ ಶಿಷ್ಯರೆಲ್ಲ ಸೇರಿ ಅಭಿನಂದನ ಸಮಾರಂಭಗೈದು ತೊಡಿಸಿದ್ದ ಅಭಿಜ್ಞಾನ ಮುದ್ರಿಕೆಯದು. ಅಂಗುಲಿಮಾಲಾ ಕಳ್ಳರು ಮುದ್ರಿಕೆಯನ್ನು ಕಳಚಿಕೊಡಲು ವಿನಂತಿಸಿದರು. ಗುರುಗಳಿಗೆ ಸಾಧ್ಯವಾಗಲಿಲ್ಲ. ಹೊಸ ಉಂಗುರ ಬೆರಳಿಗೆ ಬಿಗಿಯಾಗಿ ಕುಳಿತಿತ್ತು. ವಾರದ ಹಿಂದೆ, ಹಾಲುಮಾರುತ್ತಿದ್ದ ಮುದುಕಿಯೊಬ್ಬಳ ಮನೆಗೆ ಆಗಮಿಸಿದ್ದ ನಿಶಾಚರರು, ಆಕೆಯ ಬೆಂಡೋಲೆ ತಿರುಪನ್ನು ಬಿಚ್ಚಲು ತ್ರಾಸಾದಾಗ, ಕಿವಿಯ ಆಲೆಯನ್ನೇ ಹರಿದಿದ್ದರು. ಈ ತುಡುಗರು ಅಷ್ಟೊಂದು ನಿಷ್ಕರುಣೆಗಳಾಗಿರಲಿಲ್ಲ. ಸೋಪುನೊರೆ ಹಾಕಿ ಬೆರಳನ್ನು ನುಣುಪು ಮಾಡಿ ಸಾವಕಾಶವಾಗಿ ಉಂಗುರವನ್ನು ಹೊರಡಿಸಿದರು. ಇಷ್ಟೆಲ್ಲ ಘಟಿಸಿದರೂ ದೂರದೂರ ಮನೆಗಳಿದ್ದ ಕಾರಣ ಯಾರಿಗೂ ಗೊತ್ತಾಗಲಿಲ್ಲ. ಮಾಸ್ತರರೂ ಕೂಗುಹಾಕಲಿಲ್ಲ. ಹಾಕಿದ್ದರೂ ಕೇಳಿಸಿಕೊಂಡ ಯಾರಿಗೆ ತಾನೆ ನೆರವಿಗೆ ಬರುವ ಗುಂಡಿಗೆಯಿತ್ತು?

ನಾನು ಮಾಸ್ತರರನ್ನು ಸಂತೈಸಲು ಮುಂಜಾನೆ ಎದ್ದೊಡನೆ ಧಾವಿಸಿದೆ. ಅರಳಿದ ಹೂವನ್ನು ಕೀಳಲು ಮಾಲಿ ಬಂದಾಗ ಮೊಗ್ಗುಗಳು ನಾಳೆ ನಮ್ಮ ಪಾಳಿ ಎಂದು ಮೂಕವಾಗಿ ರೋದಿಸುತ್ತವೆ ಎಂದು ಸಂತವಾಣಿಯಿದೆ. ಅದರ ಪ್ರಕಾರ, ನಮ್ಮ ಮನೆಗೆ ಆಗಮಿಸಲಿರುವ ಅತಿಥಿಗಳ ಚಹರೆ ಮತ್ತು ಕರಕುಶಲತೆಯನ್ನು ಪೂರ್ವಭಾವಿಯಾಗಿ ಅಧ್ಯಯನ ಮಾಡುವುದು ನನ್ನ ಇರಾದೆಯಾಗಿತ್ತು. ಸ್ವಾಂತನದ ಮಾತು ಪೂರೈಸಿದ ಬಳಿಕ 'ಸಾರ್, ನೀವೊಂದು ನಾಯಿ ಸಾಕಿದ್ದರೆ ಹಿಂಗಾಗುತ್ತಿರಲಿಲ್ಲ' ಎಂದು ಉಚಿತ ಬೋಧೆ ಮಾಡಿದೆ. ಸಮಸ್ತವನ್ನೂ ಕಳಕೊಂಡಿದ್ದ ಅವರು ಮಾತಾಡಲಿಲ್ಲ. ನನ್ನನ್ನು ಶೂನ್ಯನೋಟದಿಂದ ನೋಡುತ್ತ ಕಟುವಿಷಾದದ ನಸುನಗುವನ್ನು ಬೀರಿದರು.

